ಗುಲ್ಬರ್ಗಾ ವಿಭಾಗ		
ಗುಲ್ಬರ್ಗಾ	-	650
ಬೀದರ್	-	350
ರಾಯಚೂರು	-	333
ಕೊಪ್ಪಳ	-	216
ಬಳ್ಳಾರಿ	-	402
		1951

ಬಸವನಬಾಗೇವಾಡಿ ಕ್ಷೇತ್ರದ ದೋಣಿ ನದಿ ಸೇತುವೆಯ ಬ್ಯಾಂಕ್ ವರ್ಕ್ ಪೂರ್ಣಗೊಳಿಸುವಿಕೆ

611 (1017) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವನ ಬಾಗೇವಾಡಿ ವಿಧಾನಸಭೆ ಕ್ಷೇತ್ರದ ವಿಜಾಪುರ ಬಾಗೇವಾಡಿ ರಸ್ತೆಯಲ್ಲಿರುವ ನಂದಿಹಾಳ ಕ್ರಾಸ್ ಡೋಣಿ ನದಿ ಸೇತುವೆಯ ಬಿಟ್ಟು ಹೋಗಿರುವ ಬ್ಯಾಂಕ್ ವರ್ಕನ್ನು ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿ ಇದೆಯೇ;

ಆ) ಈ ಬಿಟ್ಟುಹೋಗಿರುವ ಕಾಮಗಾರಿ ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮವೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಈ ಕಾಮಗಾರಿಯನ್ನು ತೆಗೆದುಕೊಳ್ಳಲು ಈಗಾಗಲೇ ಕ್ರಮ ತೆಗೆದುಕೊಂಡಿದ್ದು ಸದ್ಯದಲ್ಲಿಯೇ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಟಿ. ನರಸೀರಪುರದಲ್ಲಿ ಮಿನಿ ವಿಧಾನ ಸೌದ ನಿರ್ಮಾಣ

612 (677) ಡಾ॥ ಭಾರತಿ ಶಂಕರ್ (ಟಿ. ನರಸೀಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಎಷ್ಟು ತಾಲ್ಲೂಕುಗಳಲ್ಲಿ ಈವರೆವಿಗೆ ಮಿನಿ ವಿಧಾನ ಸೌಧ ನಿರ್ಮಾಣವಾಗಿದೆ; ಇನ್ನೂ ಎಷ್ಟು ಸ್ಥಳಗಳಲ್ಲಿ ನಿರ್ಮಾಣವಾಗಬೇಕಾಗಿದೆ;

ಆ) ಟಿ. ನರಸೀಪುರದಲ್ಲಿ ಮಿನಿ ವಿಧಾನ ಸೌಧ ನಿರ್ಮಾಣದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಈ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ;

ಈ) ಇದರ ಅಂದಾಜು ವೆಚ್ಚವೆಷ್ಟು?

ಉ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ 56 ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧಗಳು ಲೋಕೋಪಯೋಗಿ ಇಲಾಖೆಯಿಂದ ನಿರ್ಮಾಣವಾಗಿದ್ದು, 12 ತಾಲ್ಲೂಕುಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಇದಲ್ಲದೆ 88 ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ.

ಅ) ಹೌದು.

ಇ) ಹೌದು.

ಈ) ರಾಜ್ಯದ 88 ತಾಲ್ಲುಕುಗಳಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡುವ ಕುರಿತಂತೆ ಸಾಲ ಪಡೆಯಲು ಸರ್ಕಾರದ ಅನುಮೋದನೆ ನಿರೀಕ್ಷಿಸಲಾಗುತ್ತಿದೆ. ವಿವರವಾದ ಅಂದಾಜು ನಂತರ ತಯಾರಿಸಲಾಗುವುದು.

ಉ) ಸಾಲ ಮಂಜೂರಾದ ನಂತರ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ನಂಜನಗೂಡು ಟಿ. ನರಸೀಪುರ ಜಿಲ್ಲಾ ಮುಖ್ಯ ರಸ್ತೆ

613 (1008) ಶ್ರೀ ಡಾ।। ಭಾರತಿ ಶಂಕರ್ (ಟಿ.ನರಸೀಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಟಿ. ನರಸೀಪುರ - ನಂಜನಗೂಡು ಜಿಲ್ಲಾ ಮುಖ್ಯರಸ್ತೆಗೆ (ಎಂ.ಡಿ.ಆರ್) ಈವರೆಗೆ ಒದಗಿಸಿರುವ ಅನುದಾನವೆಷ್ಟು;

ಆ) ಪ್ರಸ್ತುತ ಸಾಲಿನಲ್ಲೂ ಕೇಂದ್ರ ರಸ್ತೆ ನಿಧಿ (ಸಿ.ಆರ್.ಎಫ್।) ಯಿಂದ ಹಣ ಒದಗಿಸಲಾಗುವುದೇ;

ಇ) ಕಳೆದ 4 ವರ್ಷಗಳಲ್ಲಿ ವಾರ್ಷಿಕ ದುರಸ್ತಿಗೆ ಒದಗಿಸಿರುವ ಹಣವೆಷ್ಟು;

ಈ) ಹತ್ತಿರದ ಬನ್ನಾರಿ ಷುಗರ್ಸ್‌ನವರು ಕಟ್ಟುವ ರಸ್ತೆ ಸೆಸ್ ಹಣವನ್ನು ಈ ರಸ್ತೆಗೆ ಒದಗಿಸಲು ಇರುವ ಅಡೆತಡೆಯಾದರೂ ಏನು;

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಟಿ. ನರಸೀಪುರ ನಂಜನಗೂಡು ಜಿಲ್ಲಾ ಮುಖ್ಯ ರಸ್ತೆಗೆ (ಎಂ.ಡಿ.ಆರ್) ಈವರೆಗೆ 88.00 ಅನುದಾನ ಒದಗಿಸಿರುತ್ತದೆ. ವಿವರಗಳು ಕೆಳಕಂಡಂತೆ ಇರುತ್ತದೆ.

1)	3054 ಯೋಜನೇತರ ಅಡಿಯಲ್ಲಿ	26.00 ಲಕ್ಷ
2)	3054 ಸಿಆರ್‌ಎಫ್ ಯೋಜನೆ ಅಡಿಯಲ್ಲಿ	50.00 ಲಕ್ಷ
3)	3054 ಸಕ್ಕರೆ ಕಾರ್ಖಾನೆ ರಸ್ತೆಗಳ ಅಭಿವೃದ್ಧಿ ಶಿರ್ಷಿಕೆಯಲ್ಲಿ	12.00 ಲಕ್ಷ
	ಒಟ್ಟು	88.00 ಲಕ್ಷ

ಆ) ಪ್ರಸ್ತುತ ಸಾಲಿನಲ್ಲಿ ಸಿ.ಆರ್.ಎಫ್ ಯೋಜನೆಯಡಿಯಲ್ಲಿ ಈ ರಸ್ತೆಯ ಅಂದರೆ ಟಿ. ನರಸೀಪುರ ನಂಜನಗೂಡು ರಸ್ತೆಯ ಜಿಲ್ಲಾ ಮುಖ್ಯ ರಸ್ತೆಯ ಸಂಖ್ಯೆ 16.10 ರಿಂದ 20.80 ಕಿಮೀ ವರೆಗೆ ಅಭಿವೃದ್ಧಿ ಮತ್ತು ಡಾಂಬರೀಕರಣಕ್ಕಾಗಿ ರೂ. 50.00 ಲಕ್ಷಗಳ ಹಣವನ್ನು ಒದಗಿಸಲಾಗಿರುತ್ತದೆ.

ಇ) ವಾರ್ಷಿಕ ದುರಸ್ತಿಗೆ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿರುತ್ತದೆ.

1999-2000	1,42,800.00
2000-2001	1,42,800.00
2001-2002	2,52,742.00
2002-2003	2,52,280.00